ಕವಿತೆ

## ಜಯಂತ ಕಾಯ್ಕಿಣಿ

ಕಲೆ: ವಾಗೀಶ ಹೆಗಡೆ

# ಬಾಕಿ ಪುಟ



ಓದಲು ಹಿಡಿದಿದ್ದ ಕಾದಂಬರಿ ಇನ್ನೇನು ಒಂದಿಷ್ಟು
ಪುಟಗಳು ಬಾಕಿ ಇವೆ ಎಂದಾಗಲೇ ಶುರು ತಳಮಳ
ಅಯ್ಯೋ ಮುಗಿಯಲು ಬಂತಲ್ಲ
ಮತ್ತೆ ಮತ್ತೆ ಮುಗುಚಿ ಪುಟ ಸಂಖ್ಯೆ ನೋಡುವುದು
ಸದ್ಯ ಮೂವತ್ತು ಬಾಕಿ ಇದೆ, ಸದ್ಯ ಇಪ್ಪತ್ತೈದು ಬಾಕಿ
ಈ ತಪಾಸಣೆ ನಡೆದಾಗ ಕೊನೆಯ ಪುಟ ಕೊನೆಯ ಪ್ಯಾರಾ
ಕೊನೆಯ ಸಾಲಿನ ಮಜಕೂರಿನ ಕಡೆ
ಕಡೆಗಣ್ಣೂ ಹಾಯದಂತೆ ಜೀವವೇ ಕಾಯುವುದು